



# ಕಾಮನಬಿಲ್ಲಿನ ಬಣ್ಣದ ಮಿಡತೆ

(6ನೇ ಪುಟದಿಂದ)

ವಾರವಿಡೀ ಮಳೆ ಬಂದು ನಿಂತಿತ್ತು. ಮೊನ್ನೆ ಸಂಜೆ ಕ್ಯಾಮೆರಾ ಹೆಗಲಿಗೇರಿಸಿಕೊಂಡು ನಮ್ಮೂರ ಹೊಲಗಳ ಪಕ್ಕ ಸಾಗಿದ್ದೆ. ಆಗಲೇ ಪಕ್ಷಿಗಳು ಚಿಲಿಪಿಲಿಗುಟ್ಟುತ್ತ ಗೂಡು ಸೇರುವ ಹುನ್ನಾರದಲ್ಲಿದ್ದವು. ದೀರ್ಘ ಹೆಜ್ಜೆಗಳನ್ನಿಟ್ಟು ಸಾಗುತ್ತಿದ್ದವನಿಗೆ ಪಕ್ಕದಲ್ಲಿದ್ದ ಎಕ್ಕದ ಗಿಡ ತಡೆದು ನಿಲ್ಲಿಸಿತು. ಖುಷಿಯನ್ನು ತಡೆದುಕೊಳ್ಳಲಾಗಲಿಲ್ಲ. ಗಿಡದಲ್ಲಿ ಕಾಮನಬಿಲ್ಲಿನ ಬಣ್ಣದ ಮಿಡತೆಗಳು!

ಕ್ಯಾಮೆರಾ ತನ್ನ ಕೆಲಸ ಆರಂಭಿಸಿತು. ಪಟಪಟನೆ ಹಲವಾರು ಕೋನಗಳಲ್ಲಿ ಫೋಟೋಗಳನ್ನು ಕ್ಲಿಕ್ಕಿಸಿದೆ. ಇಲ್ಲಿ ನನಗೆ ಬಹುವರ್ಣದ ಮಿಡತೆಗಳು ಕಂಡವು. ಇವಕ್ಕೆ 'ಕಾಮನಬಿಲ್ಲಿನ ರಂಗಿನ ಮಿಡತೆಗಳು' ಎನ್ನುತ್ತಾರೆ. ಎರಡು ಪ್ರಭೇದಗಳ ಮಿಡತೆಗಳು ಒಂದೇ ಗಿಡದಲ್ಲಿ! ಡ್ಯಾಕ್ಟಿಲೋಟಂ ಬೈಕಲರ್ ಮತ್ತು ಪೋಯಿಕಿಲೋಸೆರಸ್ ಪಿಕ್ಟಸ್ ಎಂಬ ವೈಜ್ಞಾನಿಕ ನಾಮಕರಣದ ಮಿಡತೆಗಳು.

ಸಂಧಿಪದಿ ವಂಶದ ಅಕ್ರಿಡಿಡೇ ಕುಟುಂಬದ ತುಂಬ ಆಕರ್ಷಕವಾದ ಈ ಮಿಡತೆಯ ವೈಜ್ಞಾನಿಕ ಹೆಸರು ಡ್ಯಾಕ್ಟಿಲೋಟಂ ಬೈಕಲರ್. ಜರ್ಮನ್ ಕೀಟಶಾಸ್ತ್ರಜ್ಞ ಟೌಸಂಟ್ ಡಿ ಕಾರ್ಪೆಂಟರ್ 1843ರಲ್ಲಿ ಮೊಟ್ಟ ಮೊದಲಿಗೆ ಇದನ್ನು ವಿವರಿಸಿದ.

ಗಂಡು ಮಿಡತೆಯ ಉದ್ದ 20 ಮಿ.ಮೀ ಇದ್ದರೆ, ಹೆಣ್ಣು ಮಿಡತೆಯ ಉದ್ದ 35 ಮಿ.ಮೀ ಇರುತ್ತದೆ. ತಲೆಯು ಭರ್ಚಿಯಂತಿರುತ್ತದೆ. ಪ್ರೌಢ ಕೀಟದ ತಲೆಯ, ಎದೆಯ ಮತ್ತು ಹೊಟ್ಟೆಯ ಭಾಗದ ಮೇಲೆ ಹಳದಿ, ನೀಲಿ ಪಟ್ಟಿಗಳಿವೆ. ರೆಕ್ಕೆಯ ಮಂಭಾಗ ಹಸಿರು, ಹಳದಿಯಾಗಿಯೂ, ಹಿಂಭಾಗ ಕಂಪಾಗಿಯೂ ಹಾರುವಾಗ ಗೋಚರಿಸುತ್ತವೆ. ಹಿಂಗಾಲಿನ ಟಿಬಿಯಾದ ಮೇಲೆ 6–8 ಮುಳ್ಳಿನಂಥ ರಚನೆಗಳಿವೆ. ರೆಕ್ಕೆಗಳು ಅಭಿವೃದ್ಧಿಯಾಗಿಲ್ಲದ ಕಾರಣ ದೂರಕ್ಕೆ ಹಾರಲಾಗುವುದಿಲ್ಲ.

ಈ ಮಿಡತೆಗಳಲ್ಲಿ ಇದುವರೆಗೆ ಮೂರು ಪ್ರಭೇದಗಳನ್ನು ಗುರುತಿಸಲಾಗಿದೆ. ಅವುಗಳಲ್ಲಿ ಬೇರೆ ಬೇರೆ ವರ್ಣ ಸಂಯೋಜನೆಗಳಿವೆ.

ಈ ಮಿಡತೆಗಳು ಜೂನ್‌ದಿಂದ ಆಗಸ್ಟ್ ಅವಧಿಯಲ್ಲಿ ತತ್ತಿಗಳನ್ನಿಡುತ್ತವೆ. ಒಂದು ಬೀಜಕೋಶದಲ್ಲಿ 70ರಿಂದ –200ರವರೆಗೆ ತತ್ತಿಗಳಿರುತ್ತವೆ. ಸೆಪ್ಟೆಂಬರ್‌ನಲ್ಲಿ ಮರಿಗಳು ಹೊರಬರುತ್ತವೆ.

ಇವು ಮಧ್ಯಾಹ್ನದ ಹೊತ್ತಿಗೆ ಪೊದೆಯೊಳಗೆ ಸೇರಿಕೊಳ್ಳುತ್ತವೆ. ರಾತ್ರಿ ಪೊದೆಯ ತುದಿಯತ್ತ ಸಾಗುತ್ತವೆ. ಇದು ವೈರಿಗಳಿಂದ ತಪ್ಪಿಸಿಕೊಳ್ಳುವ ಉಪಾಯವಿರಬಹುದು. ಹೆಚ್ಚಾಗಿ ಅಮೆರಿಕ ಸಂಯುಕ್ತ ಸಂಸ್ಥಾನ, ಕೆನಡಾ, ಮೆಕ್ಸಿಕೊ ಹುಲ್ಲುಗಾವಲುಗಳಲ್ಲಿ ಕಂಡುಬರುತ್ತವೆ.

ಭಾರತದಲ್ಲಿ ಪೋಯಿಕಿಲೋಸೆರಸ್ ಪಿಕ್ಟಸ್ ಎಂಬುದು ಹೆಚ್ಚಾಗಿ ಕಂಡುಬರುವ ಪ್ರಭೇದ. ಪೋಯಿಕಿಲೋಸೆರಸ್ ಪಿಕ್ಟಸ್ ಕೂಡ ದಟ್ಟ ಬಣ್ಣದ್ದು. ಹೊಟ್ಟೆಯ ಭಾಗದಲ್ಲಿ ದಟ್ಟ ಕೆಂಪು ಬಣ್ಣದ ಚಿಕ್ಕ ಕಲೆಗಳಿವೆ. ಇದು ಪೈರ್ಗೋರ್ಮಾರ್ಫಿಡೇ ಕುಟುಂಬಕ್ಕೆ ಸೇರಿದೆ.

ಇವೆರಡೂ ಕೆಲೋಟ್ರೋಪಿಸ್ ಗಿಗ್ಯಾಂಟಿಯಾದ (ಎಕ್ಕ) ವಿಷಕಾರಿ ಎಲೆಗಳನ್ನು ಸೇವಿಸುತ್ತವೆ. ಭದ್ರವಾಗಿ ಹಿಡಿದರೆ ಹಾಲಿನಂಥ, ತೆಳು ಹಳದಿ, ಕೆಟ್ಟ ವಾಸನೆಯ ದ್ರವವನ್ನು ಕೆಲವು ಇಂಚುಗಳವರೆಗೆ ಚಿಮ್ಮಿಸುತ್ತವೆ.

ಇವುಗಳ ಬಣ್ಣವು ಹಲ್ಲಿಗಳಿಗೆ ಹೆಚ್ಚು ಆಕರ್ಷಕವಾಗಿ ಕಂಡುಬರುವುದಿಲ್ಲ. ಇದು ಅವುಗಳಿಗೆ ಮುನ್ನೆಚ್ಚರಿಕೆಯೂ ಹೌದು. ಹಲ್ಲಿ, ಓತಿಗಳ ಪರಿಸರದಲ್ಲಿ ಈ ಮಿಡತೆಗಳು ಇರುವುದಿಲ್ಲ. ಏಕೆಂದರೆ ಅವುಗಳಿಗೆ ಓತಿಗಳು ಅಪರಿಚಿತವೂ ಹೌದು. ಪಕ್ಷಿಗಳಿಗೂ ಈ ಮಿಡತೆಗಳು ರುಚಿಯೆನಿಸುವುದಿಲ್ಲ. ಹಾಗಾಗಿ ಬೇಟೆಯಿಂದ ಈ ಕೀಟಗಳು ಬಚಾವಾಗುತ್ತವೆ.